ವಿಚಾರ ಲಹರಿ

# ವಿಶ್ವಕಪ್ ಎಂಬ ಮಹಾಯುದ್ಧ

ಫುಟ್‌ಬಾಲ್ ಮಹಾಯುದ್ಧ ಮುಗಿದಿದೆ. ಅದು ಕೇವಲ ಆಟವಲ್ಲ, ವ್ಯಕ್ತಿ ಪ್ರತಿಷ್ಠೆಯಲ್ಲ. ಅದು ರಾಷ್ಟ್ರಾಭಿಮಾನ, ದೇಶಭಕ್ತಿ ಮತ್ತು ನಿಷ್ಠೆಯ ಪರಾಕಾಷ್ಠೆ. ನನ್ನ ದೇಶ ಜಗತ್ತಿನಲ್ಲಿ ಏಕಮೇವಾದ್ವಿತೀಯವಾಗಿ ಎದ್ದು ನಿಲ್ಲಬೇಕೆಂಬ ಛಲ. ಅದೊಂದು ಸಾಂಕೇತಿಕ ಯುದ್ಧವೇ. ಈ ಆಟಗಾರರ ತರಬೇತಿ ಸೈನಿಕರ ತರಬೇತಿಗಿಂತ ಏನೂ ಕಡಿಮೆ ಇರುವುದಿಲ್ಲ. ಇದನ್ನು ಪೂರ್ವಯೋಜಿತ ಸ್ನೇಹಪೂರ್ವಕ ಸಮರವೆಂದು ಕರೆಯಬಹುದು. ಆಟಗಾರರ ತಂಡದಲ್ಲಿ ಕೇವಲ 11 ಜನರು ಮಾತ್ರ ಇರುವುದಿಲ್ಲ. ದೇಶದ ಪ್ರತಿಯೊಬ್ಬ ಪ್ರಜೆಯೂ ಇರುತ್ತಾನೆ. ಅವರೆಲ್ಲರೂ ಉಸಿರು ಬಿಗಿ ಹಿಡಿದು ತಮ್ಮನ್ನು ನೋಡುತ್ತಿರುವರೆಂಬ ಅರಿವು ಇವರಿಗಿರುತ್ತದೆ. ಗುರಿ ಎಲ್ಲರಿಗೂ ಒಂದೇ, ಗೆಲುವು. ಆಟವನ್ನು ಗೆಲ್ಲುವ ಮೂಲಕ ಆ ದೇಶ ತನ್ನನ್ನು ಜಗತ್ತಿಗೆ ತೆರೆದುಕೊಳ್ಳುವ ರೀತಿಯೆ ಬೇರೆ. ಗೆಲ್ಲುವುದು ಸುಲಭವೂ ಅಲ್ಲ, ಸಾಮಾನ್ಯವೂ ಅಲ್ಲ. ಆ ಗೆಲುವಿನ ಹಿಂದಿರುವ ಶ್ರಮ, ಒಗ್ಗಟ್ಟು, ಸಮಷ್ಟಿ ಪ್ರಜ್ಞೆ, ದೇಶವಾಸಿಗಳ ಪ್ರೋತ್ಸಾಹ, ಸರಕಾರದ ಸಹಕಾರ, ಅಲ್ಲಿನ ಕ್ರೀಡಾ ಸಾಮರ್ಥ್ಯ, ಆರ್ಥಿಕ ಬಲ ಎಲ್ಲವನ್ನೂ ಇಡೀ ಜಗತ್ತು ಬೆರಗಿನಿಂದ ನೋಡುವಂತಾಗುತ್ತದೆ. ಒಬ್ಬ ಪೀಲೆ, ಒಬ್ಬ ಮರಡೊನ ಹುಟ್ಟುವುದು, ದೇಶದ ಕಣ್ಮಣಿಗಳಾಗುವುದು ಇಂತಹ ಸಮಷ್ಟಿ ಬಲದಿಂದಲೆ.

ತೃತೀಯ ಜಗತ್ತಿನ ಕೆಲವು ವಸಾಹತುಶಾಹಿ ರಾಷ್ಟ್ರಗಳಲ್ಲಿ ಕ್ರಿಕೆಟ್ ಅತ್ಯಂತ ಜನಪ್ರಿಯ ಆಟವೆನಿಸಿದೆ. 'ಫೈರ್ ಇನ್ ದಿ ಬೆಬಿಲೋನ್' ಎಂಬ ಕ್ರಿಕೆಟ್ಟಿಗೆ ಸಂಬಂಧಿಸಿದ ಒಂದು ಚಲಚಿತ್ರವಿದೆ. ಆ ಕಾಲಮಾನದ ಜಾಗತಿಕ ಸಂದರ್ಭದಲ್ಲಿ ವೆಸ್ಟ್ ಇಂಡೀಸ್ ಆಟಗಾರರ ಮನಸ್ಥಿತಿಯನ್ನು ಚಿತ್ರದಲ್ಲಿ ಅತ್ಯದ್ಭುತವಾಗಿ ಸೆರೆ ಹಿಡಿಯಲಾಗಿದೆ. ಎಪ್ಪತ್ತರ ದಶಕದ ಆದಿಭಾಗದಲ್ಲಿ ಆಫ್ರಿಕಾದ ಕೆಲವು ದೇಶಗಳಲ್ಲಿ ವಸಾಹತುಶಾಹಿಯ ಹಿಡಿತ ಕೊನೆಗೊಂಡಿರಲಿಲ್ಲ. ದಕ್ಷಿಣ ಅಫ್ರಿಕಾದಲ್ಲಿ ಇನ್ನೂ ಅಪಾರ್ಥೀಡ್ ಚಾಲ್ತಿಯಲ್ಲಿತ್ತು. ಕ್ರಿಕೆಟ್ ಇಂಗ್ಲೆಂಡ್ ದೇಶದ ಆಟವೆಂಬುದು ತಿಳಿದ ವಿಷಯವೆ. ಈ ಆಟವನ್ನು ವಸಾಹತೀಕರಣದ ಸಾಧನವನ್ನಾಗಿ ಬಳಸಿಕೊಂಡರು ಎಂಬುದು ಅಂದು ಪ್ರಚಲಿತವಿದ್ದ ಮಾತು. ಆದ್ದರಿಂದ ಕರಿಯ ಆಟಗಾರರು ಇಂಗ್ಲೆಂಡ್ ಅಥವಾ ಆಸ್ಟ್ರೇಲಿಯಾದ ಬಿಳಿಯ ಆಟಗಾರರೊಂದಿಗೆ ಆಡುವುದೆಂದರೆ ಅದು ಯುದ್ಧವೆ! ವಿವಿಯನ್ ರಿಚರ್ಡ್ಸ್ ಸಂದರ್ಶನವೊಂದರಲ್ಲಿ 'ನಾವೂ ಸಮಾನರು ಎಂಬುದನ್ನು ತೋರಿಸಿಕೊಡುತ್ತೇವೆ' ಎನ್ನುತ್ತಾನೆ. ಅವನ ಕೋಚ್ ಈ ಆಟ ಸಮಸಮಾಟದ ವೇದಿಕೆ ((level playing field) ಎಂದು ಹೇಳುತ್ತಾನೆ. ನಮ್ಮ ಬಣ್ಣ ಕಪ್ಪಾದರೇನಂತೆ? ಎಂದು ಮತ್ತೊಬ್ಬ ಕೇಳುತ್ತಾನೆ. ಅಂದರೆ ಅವರಿಗೆ ಆಟ ಕೇವಲ ಆಟವಾಗಿರುವುದಿಲ್ಲ. ತಮ್ಮ ಜನಾಂಗವನ್ನು ಆಳಿದ ಬಿಳಿಯರ ವಿರುದ್ಧ ಪ್ರತೀಕಾರದ ಪಣವಾಗಿತ್ತು. ತಮ್ಮ ಶೋಷಕರನ್ನು ಬಗ್ಗುಬಡಿಯುವ ಅಪೂರ್ವ ಅವಕಾಶ. ಸ್ವಾತಂತ್ರ್ಯ, ಸಮಾನತೆಗಳಿಂದ ವಂಚಿತರಾಗಿದ್ದ ಇವರ ಧಮನಿಗಳಲ್ಲಿ ಹರಿಯುತ್ತಿದ್ದುದು ರೊಚ್ಚು ಬೆರೆತ ರಕ್ತ.

ಎದುರಾಳಿಗಳೇನೂ ಇವರನ್ನು ಸುಮ್ಮನೆ ಬಿಡುತ್ತಿರಲಿಲ್ಲ. ಇವರು ಎದುರಿಸಿದ ಅವಮಾನ ಅಷ್ಟಿಷ್ಟಲ್ಲ. ಆಸ್ಟ್ರೇಲಿಯಾ ತಂಡದ ಡೆನಿಸ್ ಲಿಲ್ಲಿ ಬೌಲ್ ಮಾಡುವಾಗ ಮೈದಾನದಲ್ಲಿದ್ದ ಬಿಳಿಯ ಬೆಂಬಲಿಗರು 'ಲಿಲ್ಲಿ ಲಿಲ್ಲಿ ಕಿಲ್ ಕಿಲ್' ಎಂದು ಅಬ್ಬರಿಸುತ್ತಿದ್ದರು, ಅದರೂ ಇವರು ಎದೆಗುಂದದೆ ಅವರ ನೆಲದಲ್ಲಿಯೇ ಗೆದ್ದರು. ಇಂಗ್ಲೆಂಡಿನಲ್ಲಿ ಆಡುವಾಗ ಅಲ್ಲಿನ ಬಿಳಿಯ ಅಭಿಮಾನಿಗಳು ಇವರನ್ನು ಕೊಲೆಪಾತಕರು (assassins) ಎಂದು ಹಂಗಿಸುತ್ತಾರೆ. ಅಲ್ಲೂ ಗೆಲ್ಲುತ್ತಾರೆ. 1980 ರಿಂದ 1995 ರವರೆಗೆ 15 ವರ್ಷಗಳು ಸತತವಾಗಿ ಗೆಲುವು ಸಾಧಿಸಿದ ವೆಸ್ಟ್ ಇಂಡಿಯನ್ನರಿಗೆ ಅದು ಕೇವಲ ಆಟವಾಗಿರಲಿಲ್ಲ. ಅದೊಂದು ಯುದ್ಧವಾಗಿತ್ತು. ಇಲ್ಲಿ ಸಾಂಕೇತಿಕತೆಯೆ ದೊಡ್ಡದು. ಅ ಮೂಲಕ ಕರಿಯ ಜನಾಂಗ (ಕೇವಲ ಆಟಗಾರರಲ್ಲ) ಕೀಳರಿಮೆಯನ್ನು ತೊಡೆದುಕೊಳ್ಳುತ್ತಲೇ ಸಮಾನತೆಯ ಮಂತ್ರವನ್ನು ಸಾರಲು ಹಂಬಲಿಸುತ್ತಿತ್ತು. ಆ ಸಂದರ್ಭದಲ್ಲಿ ವಿಶ್ವವಿಖ್ಯಾತ ಗಾಯಕ ಬಾಬ್ ಮಾರ್ಲಿ ರಚಿಸಿ ಹಾಡಿದ 'ಎದ್ದೇಳು, ನಿಲ್ಲು ನಿನ್ನ ಹಕ್ಕಿಗಾಗಿ, ಹೋರಾಟವನ್ನು ಬಿಡದಿರು' (Get up, stand up for your right, don't give up your fight) ಎಂಬ ಹಾಡೂ ಸಹ ದೇಶಭಕ್ತಿ ಗೀತೆಯಂತೆಯೆ ಚೇತೋಹಾರಿಯಾಗಿದೆ.

ಭ್ರಷ್ಟತೆ ಕ್ರೀಡಾಲೋಕವನ್ನು ಪ್ರವೇಶಿಸಿದ ಮೇಲೆ ಪರಿಸ್ಥಿತಿ ಭಿನ್ನವಾಗಿದೆ. ಅದಕ್ಕೆ ಬಲಿಪಶುಗಳು ಬಡ ಮತ್ತು ಮಧ್ಯಮ ರಾಷ್ಟ್ರಗಳೆ. ಒಬ್ಬನೇ ಒಬ್ಬ ಆಟಗಾರನಲ್ಲಿ ದೇಶಾಭಿಮಾನದ ಕಿಚ್ಚು ನಂದಿಹೋದರೂ ಗೆಲುವು ದುರ್ಲಭ. ಪ್ರಾರಂಭಿಕ ಪಂದ್ಯಗಳಲ್ಲಿಯೇ ಕೆಮರೂನ್ ಆಟಗಾರರು ಕಳ್ಳಾಟದಿಂದ ಸಿಕ್ಕಿಬಿದ್ದರು. ಉರುಗ್ವೆಯ ಒಬ್ಬ ಆಟಗಾರನಂತೂ ಎದುರಾಳಿಯ ಹೆಗಲು ಕಚ್ಚಿ ಸುದ್ದಿ ಮಾಡಿದ. ಇನ್ನು ಕ್ರಿಕೆಟ್ ಮೋಸದಾಟ ಈಗಾಗಲೇ ಜನಜನಿತವಾಗಿದೆ. 2000ದ ಇಸವಿಯಲ್ಲಿ ದಕ್ಷಿಣ ಆಫ್ರಿಕಾ ತಂಡ ಈ ಕಳಂಕ ಹೊತ್ತುಕೊಂಡಿತು. ಬೆಟ್ಟಿಂಗ್ ನಿಂದ ಪ್ರಾರಂಭವಾದ ಭ್ರಷ್ಟತೆ ಐಪಿಎಲ್ ಪಂದ್ಯಗಳನ್ನು ಪೂರ್ಣಾಹುತಿ ತೆಗೆದುಕೊಂಡಿವೆ. ಮುಗ್ಧ ಕ್ರೀಡಾಪ್ರೇಮಿಗಳು ದುಡ್ಡು ತೆತ್ತು, ನಿದ್ದೆಗೆಟ್ಟು ಆರಾಧಿಸುತ್ತಲೇ ಇದ್ದಾರೆ.

■ ಮೂಚಿ

## ಮಾತೇ ಮುತ್ತು

★ ಸ್ವರ್ಗ ನರಕಗಳೇನು ಶಾಸ್ತ್ರಸ್ಥವಲ್ಲ!
ಎದೆಯ ದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ!
ನಂಬದನು; ಅದನುಳಿದು ಋಷಿಯು ಬೇರಿಲ್ಲ!
-ಕುವೆಂಪು

★ ಸಣ್ಣದೊಂದು ಭೂಮಿಯ ತುಂಡಿನಿಂದ ತೃಪ್ತಿಕರ ಬದುಕು ಸಾಗಿಸುವಂತೆ ಮಾಡುವುದೇ ಭವಿಷ್ಯದ ಅತ್ಯಂತ ದೊಡ್ಡ ಕುಶಲಕಲೆ.
-ಅಬ್ರಹಾಂ ಲಿಂಕನ್

★ ಪುಸ್ತಕದ ಮೊದಲ ವಾಕ್ಯ ನಿಮ್ಮ ಕೈ ಕುಲುಕಿದಂತೆ; ಅದು ನಿಮ್ಮನ್ನು ಮುಜುಗರಕ್ಕೆ ಈಡು ಮಾಡಲೂ ಬಹುದು.
-ಜುಂಪಾ ಲಾಹಿರಿ

★ ನಿಮ್ಮ ವೈಫಲ್ಯಗಳ ಬಗ್ಗೆ ಚಿಂತೆ ಮಾಡಬೇಡಿ. ನಿಮಗೆ ಪ್ರಯತ್ನಕ್ಕೂ ಒಂದು ಅವಕಾಶ ಸಿಗದ ಪ್ರಕರಣಗಳ ಬಗ್ಗೆ ಚಿಂತೆ ಮಾಡಿ.
-ಜಾಕ್ ಕ್ಯಾನ್‌ಫೀಲ್ಡ್

★ ಹೂವಿನ ಪರಿಮಳ ಗಾಳಿ ಬೀಸಿದ ದಿಕ್ಕಿಗೆ ಮಾತ್ರ ಪಸರಿಸುತ್ತದೆ. ಆದರೆ ಮನುಷ್ಯನ ಒಳ್ಳೆಯತನ ಎಲ್ಲ ದಿಕ್ಕುಗಳಲ್ಲೂ ಪಸರಿಸುತ್ತದೆ.
-ಚಾಣಕ್ಯ

★ ಸವಿಯು ಸಕ್ಕರೆಯೊಳಗೊ, ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ
ಜಿಹ್ವೆ ಮನಸಿನೊಳಗೊ, ಮನಸು ಜಿಹ್ವೆಯೊಳಗೊ
ಜಿಹ್ವೆ ಮನಸುಗಳೆರಡು ನಿನ್ನೊಳಗೊ ಹರಿಯೆ
-ಕನಕದಾಸರು

★ ಗಗನನೀಲಿಮೆಯೆನ್ನ ಕಣ್ಣೆ ಸೊಗವೀವಂತೆ
ಮುಗಿವ ತರಣಿಯ ರಕ್ತ ಹಿತವೆನಿಸದೇಕೊ
ಸೊಗದ ಮೂಲವದೆಲ್ಲಿ ನೀಲದೊಳೊ
ಕಂಪಿನೊಳೊ
ಬಗೆವೆನ್ನ ಮನಸಿನೊಳೊ ಮಂಕುತಿಮ್ಮ
-ಡಿವಿಜಿ

★ ಏನನ್ನೂ ಮಾಡದೆ ಸವೆಸಿದ ಬದುಕಿಗಿಂತ, ತಪ್ಪುಗಳನ್ನು ಮಾಡುತ್ತಾ ಸಾಗಿದ ಬದುಕು ಹೆಚ್ಚು ಗೌರವಾರ್ಹವೂ, ಉಪಯುಕ್ತವೂ ಹೌದು.
-ಜಾರ್ಜ್ ಬರ್ನಾರ್ಡ್ ಷಾ

★ ಕವಿತೆಯನ್ನು ಓದುವಾಗ ಒಂದು ಚಿತ್ರ ಕಣ್ಣಿಗೆ ಕಟ್ಟಿದಂತಿರಬೇಕು.
-ಪಂಜೆ ಮಂಗೇಶರಾವ್

★ ಜನರ ಬಗ್ಗೆ ಕುತೂಹಲ ಕಡಿಮೆ ಇರಲಿ, ಅವರ ಆಲೋಚನೆಗಳ ಬಗ್ಗೆ ಹೆಚ್ಚು ಕುತೂಹಲ ಬೆಳೆಸಿಕೊಳ್ಳಿ.
-ಮೇರಿ ಕ್ಯೂರಿ

★ ಕೃತಜ್ಞರಾಗದವರು, ಹಣದ ಲೋಭದಿಂದ ಕುರುಡರಾದವರು ಉಪಕಾರದ ದೃಷ್ಟಿಗೆ ಯೋಗ್ಯರಲ್ಲ.
-ಕಥಾಸರಿತ್ಸಾಗರ